which this is to be taken up. is yet to be decided.

b) The amount required for this project is about Rs.275.00 lakhs.

c) This question does not arise.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಬರುವ ಹೆದ್ದಾರಿಗಳ ವಿಸ್ತೀರ್ಣ

22(207)

ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ): ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ತಿಳಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಬರುವ ಮೈಸೂರು-ಬಂಟ್ವಾಳ, ಮೈಸೂರು ವಿರಾಜಪೇಟೆ ಹಾಗೂ ಹಾಸನ-ಕಣ್ಣಾನೂರು ಹೆದ್ದಾರಿಗಳ ವಿಸ್ತೀರ್ಣ ಎಷ್ಟು?

ಆ) ಈ ಹೆದ್ದಾರಿಗಳಲ್ಲಿ ವಾಹನ ಸಂಚಾರ ಬಹಳಷ್ಟಿದ್ದು ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ?

ಇ) ಬಂದಿದ್ದರೆ ಹೆದ್ದಾರಿಗಳನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? ಎಷ್ಟು ಹಣ ಬಿಡುಗಡೆ ಮಾಡಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಬರುವ ರಾಜ್ಯ ಹೆದ್ದಾರಿ

1) ಮೈಸೂರು-ಬಂಟ್ವಾಳ ರಸ್ತೆಯ ಸರಪಳಿ: 61.2 ರಿಂದ 88.30 ಕಿಮಿ ವರೆಗೆ ಒಪ್ಪು 27.10 ಕಿಮೀ ಉದ್ದವಿರುತ್ತದೆ. ರಾ.ಹೆ.88

2) ಮೈಸೂರು-ವಿರಾಜಪೇಟೆ ರಸ್ತೆಯ ಸರಪಳಿ 12.20 ರಿಂದ 22.60 ಕಿಮಿ ವರೆಗೆ ಒಟ್ಟು 10.40 ಕಿಮೀ ಉದ್ದವಿರುತ್ತದೆ. (ರಾ.ಹೆ 88 (ಎ)

3) ಹಾಸನ-ಕಣ್ಣಾನೂರು ರಸ್ತೆಯ ಸರಪಳಿ 88.00 ರಿಂದ 123.20 ಕಿಮಿ ವರೆಗೆ ಒಟ್ಟು 35.20 ಕಿಮೀ ಉದ್ದವಿರುತ್ತದೆ. (ರಾ.ಹೆ. 21)

ಆ) ಹಲವೆಡೆ ರಸ್ತೆ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಗಮನಕ್ಕೆ

ಬಂದಿದೆ.

ಇ) ಸದರಿ ರಸ್ತೆಗಳಲ್ಲಿ ಉಂಟಾಗಿರುವ ಗುಂಡಿಗಳನ್ನು ಆದ್ಯತೆಯ ಮೇಲೆ ಮುಚ್ಚಲಾಗುತ್ತಿದೆ ಹಾಗೂ ವಾರ್ಷಿಕ ನಿರ್ವಹಣಾ ಅನುದಾನದಲ್ಲಿ ತೀರಾ ಹಾಳಾಗಿರುವೆಡೆಗಳಲ್ಲಿ ಡಾಂಬರೀಕರಣ ಮತ್ತು ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಈ 3 ಹೆದ್ದಾರಿಗಳಿಗಾಗಿ 158.27 ಲಕ್ಷ ರೂ.ಗಳನ್ನು ಅನುದಾನವನ್ನಾಗಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

ಮಲೆನಾಡು ಅಭಿವೃದ್ಧಿ ಮಂಡಳಿಯ ಕಾಮಗಾರಿಗಳಿಗೆ ಮಂಜೂರಾದ ಹಣ

23(235)

ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ): ಮಾನ್ಯ ಮೀನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಗೆ ಸೇರಿದಂತೆ ವಿವಿಧ ಯೋಜನೆಗಳಡಿಯಲ್ಲಿ ಕಾಮಗಾರಿಗಳಿಗೆ ಮಂಜೂರಾಗಿರುವ ಒಟ್ಟು ಮೊತ್ತ ಎಷ್ಟು; ಬಾಕಿ ಇರುವ ಮೊತ್ತ ಎಷ್ಟು (1999-2000ನೇ ಸಾಲಿಗೆ ಸಂಬಂಧಪಟ್ಟಂತೆ)

ಆ) ಈ ಕಾಮಗಾರಿಗಳಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳು ಎಷ್ಟು; ಈವರೆಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು; ಬಾಕಿ ಇರುವ ಮೊತ್ತ ಎಷ್ಟು; 1999-2000ನೇ ಸಾಲಿಗೆ ನಿಗಧಿಪಡಿಸಿರುವ ಮೊತ್ತ ಎಷ್ಟು?

ಶ್ರೀ ಬಿ.ರಮನಾಥ ರೈ (ಮೀನುಗಾರಿಕೆ, ಬಂದರು ಹಾಗೂ ಪ್ರದೇಶಾಭೃದ್ಧಿ ಸಚಿವರು):

ಅ) ರೂ. 6.07. ಕೋಟಿಗಳು

ಆ) 26 ಕಾಮಗಾರಿಗಳೂ ಪೂರ್ಣ ಗೊಂಡಿರುತ್ತವೆ.

	ಮೊತ್ತ ಲಕ್ಷ ರೂ.ಗಳಲ್ಲಿ
ಬಿಡುಗಡೆಯಾದ ಮೊತ್ತ	272.689
ಬಾಕಿ ಮೊತ್ತ	256.659
ಅನುದಾನ	529.348